ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ–584133, ರಾಯಚೂರು, ಕರ್ನಾಟಕ, ಭಾರತ

Office No. +919141030953 ಪರೀಕ್ಷಾ ವಿಭಾಗ E-mail: registrarevrur@gmail.com

ಕ್ರ.ಸಂ: ರಾವಿರಾ/ಪರೀಕ್ಷಾ/ಯು.ಜಿ–II&IV/2023-24/411 ದಿನಾಂಕ:16.10.2023

**ಪ್ರಾಂಶುಪಾಲರುಗಳಿಗೆ ಸೂಚನೆಗಳು**

1. ಅರ್ಹತೆ ಹೊಂದಿರುವ ವಿದ್ಯಾರ್ಥಿಗಳ ಹಾಜರಾತಿ/ I.A ಅಂಕಗಳನ್ನು ಕಡ್ಡಾಯವಾಗಿ ನಮೂದಿಸಲೇಬೇಕು. ತಡವಾಗಿ I.A ಅಂಕಗಳನ್ನು ಹಾಕಿದರೆ ವಿಷಯ ಉಪನ್ಯಾಸಕ, HOD, ಕಾಲೇಜಿನ ಮೇಲೆ ಪ್ರತಿ ವಿದ್ಯಾರ್ಥಿಗೆ 200/– ರೂಪಾಯಿಗಳ ದಂಡವನ್ನು ವಿಧಿಸಲಾಗುವುದು.
2. ಕೇವಲ ಆಂತರಿಕ ಅಂಕಗಳನ್ನು ಹೊಂದಿರುವ ವಿಷಯಗಳಾದ NSS/NCC/Sports ಆಂತರಿಕ ಅಂಕಗಳನ್ನು ಕಡ್ಡಾಯವಾಗಿ UUCMS ನಲ್ಲಿ ನಮೂದಿಸಬೇಕು. ಇಲ್ಲದಿದ್ದರೆ ವಿದ್ಯಾರ್ಥಿಗಳ ಫಲಿತಾಂಶ ಬರುವುದಿಲ್ಲ.
3. ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಅ ದಿನವೇ ಅಪಡೇಟ್ ಮಾಡಬೇಕು. Server busy ಇದ್ದರೆ ವಿಶ್ವವಿದ್ಯಾಲಯಕ್ಕೆ ಸಂಪರ್ಕಿಸಬೇಕು ಹಾಗೂ ಕಡ್ಡಾಯವಾಗಿ Soft Copy ಯನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಬೇಕು.
4. ಲಿಖಿತ ಪರೀಕ್ಷಾ ನಡೆದ ದಿನವೇ ಹಾಜರಾತಿಯನ್ನು ಅಪಡೇಟ್ ಮಾಡಬೇಕು. ಹಾಜರಾತಿಯನ್ನು ಹಾಕುವಾಗ ತಪ್ಪಾಗಿ ಹಾಕಿದರೆ ಅ ಕಾಲೇಜಿನ ಪ್ರಾಂಶುಪಾಲರೇ ಹೊಣೆಗಾರರಾಗುತ್ತಾರೆ.
5. ಲಿಖಿತ ಪರೀಕ್ಷಾ ನಡೆದ ದಿನವೇ MPC ಆದ ವಿದ್ಯಾರ್ಥಿಗಳ ಹಾಜರಾತಿಯನ್ನು ಕಡ್ಡಾಯವಾಗಿ UUCMS ನಲ್ಲಿ ಅಪಡೇಟ್ ಮಾಡಬೇಕು.
6. MPC ಆದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಸೀಲ್ ಮಾಡಿ ಕಳುಹಿಸಬೇಕು. ಇಲ್ಲವಾದಲ್ಲಿ ಅಂತಹ ಪ್ರಾಂಶುಪಾಲರುಗಳಿಗೆ 1000 ರೂಪಾಯಿಗಳ ದಂಡವನ್ನು ವಿಧಿಸಲಾಗುವುದು.
7. ಕಾಲೇಜಿನ ಬಿಲ್‌ಗಳನ್ನು ಸಲ್ಲಿಸುವಾಗ 'A' Formನ್ನು ಉಪನ್ಯಾಸಕರ ಪಟ್ಟಿಯಂತೆ ಜೋಡಿಸಿ ಕಡ್ಡಾಯವಾಗಿ ಸಲ್ಲಿಸಬೇಕು.
8. ಕಾಲೇಜಿನ ಸ್ಟೇಷನರಿ ಬಿಲ್‌ಗಳು ಕಡ್ಡಾಯವಾಗಿ GST ಹೊಂದಿರುವ ಬಿಲ್‌ಗಳನ್ನು ಕಳುಹಿಸಬೇಕು.
9. ಕಿರಿಯ ಮೇಲ್ವಿಚಾರಕರನ್ನು ಹಾಕುವಾಗ ಅ ದಿನ ವಿಷಯ ಹೊಂದಿರುವ ಉಪನ್ಯಾಸಕರನ್ನು ನಿಯೋಜಿಸಬಾರದು.
10. ಕಡ್ಡಾಯವಾಗಿ ಕಿರಿಯ ಮೇಲ್ವಿಚಾರಕರು ಹಾಗೂ ವಿದ್ಯಾರ್ಥಿಗಳು ಯಾವುದೇ ಸ್ಮಾರ್ಟ್‌ಫೋನ್‌ನ್ನು ಪರೀಕ್ಷೆ ನಡೆಯುವ ಕೊಠಡಿಯಲ್ಲಿ ಇಡಬಾರದು. ಇಟ್ಟರೆ ಕಿರಿಯ ಮೇಲ್ವಿಚಾರಕರ ಮೇಲೆ ಹಾಗೂ ವಿದ್ಯಾರ್ಥಿಗಳ ಮೇಲೆ ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ನಿಯಮಾವಳಿ ಅನ್ವಯ ಕ್ರಮ ಜರುಗಿಸಲಾಗುವುದು.

(ಪ್ರೊ. ಯರಿಸ್ವಾಮಿ ಎಂ.)
ಕುಲಸಚಿವರು (ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು